ಕರ್ನಾಟಕ ಉಚ್ಚ ನ್ಯಾಯಾಲಯ

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೃಷ್ಣ ಎಸ್. ದೀಕ್ಷಿತ್

ಹೆಚ್.ಆರ್. ಕೃಷ್ಣಮೂರ್ತಿ ವಿರುದ್ಧ ಕರ್ನಾಟಕ ರಾಜ್ಯದ ಪ್ರತಿನಿಧಿಯಾಗಿ ಕಾರ್ಯದರ್ಶಿಗಳು, ಹಣಕಾಸು ಇಲಾಖೆ (ಎಕ್ಸೈಸ್) ಮತ್ತು ಇತರರು*

ರಿಟ್ ಅರ್ಜಿಸಂಖ್ಯೆ: 101601/2018 (ಎಸ್-ಇಸಿ), ದಿನಾಂಕ 13 ನೇ ಏಪ್ರಿಲ್, 2018.

ಆದೇಶ

ನ್ಯಾಯಮೂರ್ತಿ ಶ್ರೀ ಕೃಷ್ಣ ಎಸ್. ದೀಕ್ಷಿತ್:

ಸಿಎಲ್ -2/ 7 ಪರವಾನಗಿ (ಲೈಸೆನ್ಸ್) ಪಡೆದಿರುವ ಅರ್ಜಿದಾರನು, ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಅನಂತಪುರ ಗ್ರಾಮದಲ್ಲಿ ಮದ್ಯಸಾರ ವ್ಯವಹಾರವನ್ನು ನಡೆಸುತ್ತಿದ್ದಾನೆ.

2. ರಾಜ್ಯ ಸರ್ಕಾರವು ತನ್ನ ಆದಾಯವನ್ನು ಹೆಚ್ಚಿಸಿಕೊಳ್ಳುವ ಉದ್ದೇಶದಿಂದ, ಸಿಎಲ್ -11 ಸಿ ಪರವಾನಗಿಗಳೊಂದಿಗೆ ಮದ್ಯಸಾರ ಮಳಿಗೆಗಳನ್ನು ಸ್ಥಾಪಿಸುವ ಮೂಲಕ ರಾಜ್ಯದಲ್ಲಿನ ವಿವಿಧ ಸ್ಥಳಗಳಲ್ಲಿ ತನ್ನ ಏಜನ್ಸಿಗಳ ಎಂದರೆ 3 ನೇ ಪ್ರತಿವಾದಿ-ಎಮ್.ಎಸ್.ಐ.ಎಲ್.ಮುಖಾಂತರ ಮದ್ಯಸಾರ ವ್ಯವಹಾರವನ್ನು ನಡೆಸಲು, ರಿಟ್ ಅರ್ಜಿಯೊಂದಿಗೆ ಲಗತ್ತಿಸಿದ ಅನುಬಂಧ-ಬಿ ಯಲ್ಲಿರುವದಿನಾಂಕ: 07.11.2016 ರ ಅಧಿಸೂಚನೆ ಮೂಲಕ, ಕಾರನೀತಿ ನಿರ್ಣಯವನ್ನು ಘೋಷಿಸಿತು.

3. ಅರ್ಜಿದಾರನ ವಾದವೆಂದರೆ, ಸದರಿ ಕಾರನೀತಿ ನಿರ್ಣಯದ ಮುಂದುವರಿಕೆಯಲ್ಲಿ, ಅಧಿಕಾರ ವ್ಯಾಪ್ತಿಯುಳ್ಳ ಪ್ರಾಧಿಕಾರಿಗಳು ಸಮೀಕ್ಷೆ ಮತ್ತು ಅಧ್ಯಯನ ನಡೆಸಿದ ನಂತರ, ಅಲ್ಲಿ ಮದ್ಯಸಾರ ಅಂಗಡಿಗಳನ್ನು ಸ್ಥಾಪಿಸಲು ಪ್ರಸ್ತಾಪಿಸಿ ವಿವಿಧ ಸ್ಥಳಗಳನ್ನು ಗುರುತಿಸಿವೆ.ವ್ಯವಹಾರ ಸಾಧ್ಯವಿರುವ ಸ್ಥಳಗಳ ಪಟ್ಟಿಯನ್ನು ರಿಟ್ ಅರ್ಜಿಯೊಂದಿಗೆ ಲಗತ್ತಿಸಿದ ಅನುಬಂಧ-ಸಿಯಲ್ಲಿ ನೀಡಲಾಗಿದೆ.

4. ಸದರಿ ವ್ಯವಹಾರ ಸಾಧ್ಯವಿರುವ ಪಟ್ಟಿಯಲ್ಲಿ, ಮದ್ಯಸಾರ ಅಂಗಡಿಯನ್ನು ಸ್ಥಾಪಿಸಲು ಶಿರಗುಪ್ಪಿ ಗ್ರಾಮದಲ್ಲಿ ವ್ಯವಹಾರ ಸಾಧ್ಯತೆ ಇಲ್ಲದಿರುವ ಕಾರಣ, ಸ್ಪಷ್ಟವಾಗಿಯೇ ಸದರಿ ಸ್ಥಳವನ್ನು ತೋರಿಸಿರುವುದಿಲ್ಲವೆಂದು ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ವಾದಿಸಿದ್ದಾರೆ.

5. ಅರ್ಜಿದಾರರ ವಾದವೆಂದರೆ, ಪ್ರಸ್ತುತ 8,000 ಜನಸಂಖ್ಯೆ ಇರುವ ಶಿರಗುಪ್ಪಿ ಗ್ರಾಮದಲ್ಲಿ ಎಮ್.ಎಸ್.ಐ.ಎಲ್. ಮಳಿಗೆಯನ್ನು ಸ್ಥಾಪಿಸುವ ಪ್ರಸ್ತಾವನೆಯನ್ನು ಅಥವಾ ಮದ್ಯಸಾರವನ್ನು ಮಾರಾಟ ಮಾಡುವುದನ್ನು ಹಲವಾರು ಗ್ರಾಮಸ್ಥರು ವಿರೋಧಿಸಿದ್ದಾರೆ.ಈ ವಿರೋಧದ ಹೊರತಾಗಿಯೂ, ಪ್ರತಿವಾದಿ-ಪ್ರಾಧಿಕಾರಿಗಳು, ಮದ್ಯಸಾರ ಅಂಗಡಿಯನ್ನು ಸ್ಥಾಪಿಸಲು, ಸ್ಥಳೀಯ ವಿಧಾನಪರಿಷತ್ ಸದಸ್ಯರ ಸೂಚನೆಯಂತೆ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದ್ದಾರೆ.ಕಾಗವಾಡ ಮತಕ್ಷೇತ್ರದ ಹಾಲಿ ವಿಧಾನಸಭಾ ಸದಸ್ಯರು, ಪ್ರಸ್ತಾವದ ವಿರುದ್ಧ ಸಾರ್ವಜನಿಕರ ಅಸಮಧಾನವನ್ನು 3 ನೇ ಮತ್ತು 6 ನೇ ಪ್ರತಿವಾದಿಗಳ ಗಮನಕ್ಕೆ ತಂದಿದ್ದಾರೆ ಎಂದೂ ಸಹ ಹೇಳಲಾಗಿದೆ.

6. ಅರ್ಜಿದಾರನ ಪರ ಮಾನ್ಯ ನ್ಯಾಯವಾದಿಗಳ ವಾದವೆಂದರೆ, ಆತನು ಯುಕ್ತವಾಗಿ ಮಂಜೂರಾದ ಪರವಾನಗಿ ಸಹಿತ, ಇದುವರೆಗೂ ಯಾವುದೇ ಸಮಯದಲ್ಲೂ ಯಾವುದೇ ಆಕ್ಷೇಪಣೆ ಮತ್ತು ದೂರುಗಳಿಲ್ಲದೆ ಮದ್ಯಸಾರ ಅಂಗಡಿಯನ್ನು ನಡೆಸುತ್ತಿದ್ದಾನೆ.ಜನಸಂಖ್ಯೆಯನುಸಾರ ಗ್ರಾಮವು ಚಿಕ್ಕದಾಗಿದೆ.ಮತ್ತೊಂದು ಮದ್ಯಸಾರ ಅಂಗಡಿಯನ್ನು ಸ್ಥಾಪಿಸಿದರೆ, ವಾಸ್ತವದಲ್ಲಿ ಅದು ಅರ್ಜಿದಾರನ ವ್ಯವಹಾರಕ್ಕೆ ಇತಿಶ್ರೀ ಹಾಡಿದಂತಾಗುತ್ತದೆ.ಇದಲ್ಲದೆ ಆತನು, ಉದ್ದೇಶಿತ ಕ್ರಮವು ಭಾರತ ಸಂವಿಧಾನದ 19 ( 1) (ಜಿ) ಅನುಚ್ಛೇದದ ಅಡಿಯಲ್ಲಿ ಖಾತ್ರಿಪಡಿಸಿದ ವ್ಯವಹಾರ ನಡೆಸಿಕೊಂಡು ಹೋಗುವ ತನ್ನ ಮೂಲಭೂತ ಹಕ್ಕಿನ ಸ್ಪಷ್ಟ ಉಲ್ಲಂಘನೆಯಾಗುತ್ತದೆಂದು ವಾದಿಸಿದ್ದಾನೆ.

7. ಅರ್ಜಿದಾರನ ಪರ ಮಾನ್ಯ ನ್ಯಾಯವಾದಿಗಳ ಹಾಗೂ ಮಾನ್ಯ ಹೆಚ್ಚುವರಿ ಸರ್ಕಾರಿ ನ್ಯಾಯವಾದಿ ಶ್ರೀ ರವಿ ಹೊಸಮನಿಯವರ ವಾದಗಳನ್ನು ಆಲ್ಲಿಸಿದ್ದೇನೆ.ರಾಜ್ಯದಲ್ಲಿನ ವಿವಿಧ ಸ್ಥಳಗಳಲ್ಲಿ ಎಮ್.ಎಸ್.ಐ.ಎಲ್. ಮುಖಾಂತರ ಮದ್ಯಸಾರ ಮಳಿಗೆಗಳನ್ನು ಸ್ಥಾಪಿಸುವ ಸಂಬಂಧದಲ್ಲಿ ಪರವಾನಗಿಗಳನ್ನು ನೀಡುವಾಗ ಅನುಸರಿಸಬೇಕಾದ ಕೆಲವು ಮಾರ್ಗಸೂಚಿಗಳನ್ನು ವಿಧಿಸಿರುವ ರಾಜ್ಯ ಸರ್ಕಾರದ 156 ಹೆಚ್.ಆರ್. ಕೃಷ್ಣಮೂರ್ತಿ -ವಿರುದ್ಧ ಕರ್ನಾಟಕ ರಾಜ್ಯದ ಪ್ರತಿನಿಧಿಯಾಗಿ ಕಾರ್ಯದರ್ಶಿಗಳು, ಹಣಕಾಸು ಇಲಾಖೆ (ಎಕ್ಸೈಸ್) ಮತ್ತು ಇತರರು ಕಾರನೀತಿ ನಿರ್ಣಯವನ್ನು ವ್ಯಕ್ತಪಡಿಸಿರುವದಿನಾಂಕ: 07.11.2016 ರ ಅಧಿಸೂಚನೆಯನ್ನು ಸಹ ನಾನು ಎಚ್ಚರಿಕೆಯಿಂದ ಪರಿಶೀಲಿಸಿದ್ದೇನೆ.ರಾಜ್ಯವು ಸದರಿ ಕಾರನೀತಿ ನಿರ್ಣಯವನ್ನು ತನ್ನ ಸ್ವಂತ ವ್ಯಾಪಾರ ಮತ್ತು ವ್ಯವಹಾರಗಳ ಉದ್ದೇಶಕ್ಕಾಗಿ ಹೊರಡಿಸಿದೆ.

8. ಮೇಲೆ ಹೇಳಿದ ಕಾರನೀತಿ ಸಂಬಂಧಿ ಅಧಿಸೂಚನೆಯಲ್ಲಿನ ಉಪಬಂಧಗಳು, ಯಾರೇ ಖಾಸಗಿ ಮದ್ಯಸಾರ ಅಂಗಡಿಯ ಮಾಲೀಕನ ಪರವಾಗಿ ಯಾವುದೇ ಸಂಪೂರ್ಣ ಹಕ್ಕನ್ನು ಸೃಜಿಸುವುದಿಲ್ಲ.ಆದುದರಿಂದ, ಅರ್ಜಿದಾರನ ಪರ ನ್ಯಾಯವಾದಿಗಳು ಸದರಿ ಅಧಿಸೂಚನೆಯ ಉಪಬಂಧಗಳನ್ನು ಅಲಂಬಿಸಿರುವುದರಿಂದ ಅವರ ವಾದಕ್ಕೆ ಸಮರ್ಥನೆ ಸಿಗುವುದಿಲ್ಲ.

9. ಹಾಗೆಯೇ, ಸದರಿ ಅಧಿಸೂಚನೆಯು, ಮದ್ಯಸಾರ ವ್ಯವಹಾರವನ್ನು ನಡೆಸುವ ತನ್ನ ಮೂಲಭೂತ ಹಕ್ಕನ್ನು ಉಲ್ಲಂಘಿಸುತ್ತದೆ ಎಂಬ ಅರ್ಜಿದಾರನ ಪರ ನ್ಯಾಯವಾದಿಗಳ ವಾದವು ಸಹ, ಚಕ್ರವರ್ತಿ -ವಿರುದ್ಧ-ಎಕ್ಸೈಸ್ ಕಲೆಕ್ಟರ್ 1 ' ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ನಿರ್ಣಯಿಸಿದಂತೆ, ಮದ್ಯಸಾರ ಚ ವ್ಯವಹಾರ ನಡೆಸುವುದಕ್ಕೆ ಯಾವುದೇ ಮೂಲಭೂತ ಹಕ್ಕು ಇಲ್ಲವೆಂಬಷ್ಟರಮಟ್ಟಿಗೆ ಸಮರ್ಥಿತವಾಗುವುದಿಲ್ಲ.

10. ಮಾನ್ಯ ಲೇಖಕ ಡಾ. ದುರ್ಗಾ ದಾಸ್ ಬಸು ಅವರು ತಮ್ಮ ಮ್ಯಾಗ್ನಮ್ ಓಪಸ್ ಶಾರ್ಟರ್ ಕಾನ್ಸಿಟ್ಯೂಷನ್ ಆಫ್ ಇಂಡಿಯ ಪುಸ್ತಕದ 15 ನೇ ಆವೃತ್ತಿ, ಸಂಪುಟ -1 ರ ಪುಟ ಸಂಖ್ಯೆ 332 ರಲ್ಲಿ ಈ ಕೆಳಗಿನಂತೆ ಹೇಳಿದ್ದಾರೆ:

" ಸಿ1. ( 6) (ii)1. XXXX

2. ರಾಜ್ಯವು, ಆಡಳಿತಾತ್ಮಕ ನೀತಿಯ ಕಾರಣಗಳಿಗಾಗಿ ಮಾತ್ರವಲ್ಲದೆ, ಉದಾಹರಣೆಗೆ ಉಪ್ಪು ಅಥವಾ ಮದ್ಯಸಾರದ ತಯಾರಿಕೆ;

1. ಎಕ್ಸೈಸ್ 1972 ( 2) ಎಸ್ಸಡಬ್ಲ್ಯುಆರ್ 340

ಅಥವಾ ಸ್ಪರ್ಧಾತ್ಮಕ ಪದ್ಧತಿಯಿಂದ ಉದ್ಭವವಾಗುವ ಕೆಡುಕುಗಳನ್ನು ಶಮನಗೊಳಿಸಲು, ಉದಾಹರಣೆಗೆ- ಬೆಲೆಗಳ ನಿಯಂತ್ರಣ ಅಥವಾ ಉತ್ಪನ್ನಗಳ ಗುಣಮಟ್ಟದ ಉತ್ತಮ ನಿಯಂತ್ರಣಕ್ಕಾಗಿ ಅಥವಾ ಸಾರ್ವಜನಿಕ ಉಪಯುಕ್ತ ಸೇವೆಗಳ ನಿರ್ವಹಣೆಗಾಗಿ ಮಾತ್ರವಲ್ಲದೆ, ಸುಮ್ಮನೆ ಖಾಸಗಿ ವ್ಯಾಪಾರಿಯಂತೆ ಕೇವಲ ಲಾಭ ಮಾಡಿಕೊಳ್ಳುವ ಉದ್ದೇಶಕ್ಕಾಗಿಯೂ ಸಹ ಉದಾಹರಣೆಗೆ – ಮೋಟಾರು ಸಾರಿಗೆಯ ವ್ಯವಹಾರದಂತಹ ಖಾಸಗಿ ವ್ಯಾಪಾರಿಗಳನ್ನು ಭಾಗಶಃವಾಗಿ ಅಥವಾ ಸಂಪೂರ್ಣವಾಗಿ ಉಪೇಕ್ಷಿಸುವಂತೆ ಮಾಡುವ ವ್ಯಾಪಾರ ಅಥವಾ ಕೈಗಾರಿಕೆಗಳನ್ನು ನಡೆಸಬಹುದು.ರಾಜ್ಯವು ಕೇವಲ ಒಬ್ಬ ಸ್ಪರ್ಧಿಯಾಗಿ ವ್ಯಾಪಾರ ಕ್ಷೇತ್ರ ಪ್ರವೇಶಿದ, 19 ( 1) (ಜಿ) ಅನುಚ್ಛೇದವು ಖಾತರಿಪಡಿಸಿದ ಹಕ್ಕಿನ ಉಲ್ಲಂಘನೆಯಾಗುವುದಿಲ್ಲ."

11. ಶ್ರೇಷ್ಠ ನ್ಯಾಯಶಾಸ್ತ್ರಜ್ಞ ವಿಲಿಯಮ್ ಗುಥೀ ಸಾಲ್ಮಂಡ್ ಅವರು " ಮಾನವ ಸಮಾಜದ ಎಲ್ಲಾ ರೂಪಗಳಲ್ಲಿ ರಾಷ್ಟ್ರವು ಅತ್ಯುನ್ನತವಾದುದಾಗಿದೆ ' ಎಂದು ಅಭಿಪ್ರಾಯಪಡುತ್ತಾರೆ.ಅದು ಅಪಾರ ಸಂಪತ್ತನ್ನು ಹೊಂದಿರುತ್ತದೆ ಮತ್ತು ಒಂದು ನಿಗಮಿತ ನಿಕಾಯಕ್ಕೆ ಸದೃಶವಾದ ಕಾವ್ಯಗಳನ್ನು ನಿರ್ವಹಿಸುತ್ತದೆ.ರಾಜ್ಯವು/ಸರ್ಕಾರವು ಲಾಭ ಗಳಿಸಲು ವ್ಯಾಪಾರ ಅಥವಾ ವ್ಯವಹಾರ ನಡೆಸುವ ಹಕ್ಕು ಹೊಂದಿರುವುದಿಲ್ಲ ಎಂಬ ಹಳೆಯ ಸಂಪ್ರದಾಯವು ಬಹಳ ಹಿಂದಿನಿಂದಲೇ ಅಳಿಸಿಹೋಗಿದೆ.ರಾಜ್ಯವು, ಒಬ್ಬ ಖಾಸಗಿ ವ್ಯಕ್ತಿಯಂತೆ ಯಾವುದೇ ವ್ಯಾಪಾರ ಅಥವಾ ವ್ಯವಹಾರ ಕಾವ್ಯಚಟುವಟಿಕೆಗೆ ಅನುಮತಿ ನೀಡುವ ನಿರ್ದಿಷ್ಟ ಶಾಸನವಿಲ್ಲದೆಯೇ ಅಂಥ ಕ್ಷೇತ್ರವನ್ನು ಪ್ರವೇಶಿಸಲು ಸಕ್ಷಮವಾಗಿದೆ.ಕೇಂದ್ರ ಅಥವಾ ರಾಜ್ಯದ ' ಕಾರನಿರ್ವಾಹಕ ಅಧಿಕಾರ'ದಲ್ಲಿ ವ್ಯಾಪಾರ ಅಥವಾ ವ್ಯವಹಾರ ನಡೆಸುವ ಹಕ್ಕನ್ನು ಸೇರಿಸಲಾಗಿದೆ ಎಂದು ಸ್ಪಷ್ಟಪಡಿಸಲು, ಸಂವಿಧಾನ ( 7 ನೇ ತಿದ್ದುಪಡಿ) ಅಧಿನಿಯಮ, 1956 ರ ಮೂಲಕ 298 ನೇ ಅನುಚ್ಛೇದವನ್ನು ತಿದ್ದುಪಡಿ ಮಾಡಲಾಗಿದೆ.ಹಾಗಾಗಿ, ಸರ್ಕಾರದ ಕಾರನಿರ್ವಾಹಕ ಅಧಿಕಾರಗಳನ್ನು ಚಲಾಯಿಸಿ ಮತ್ತು ಖಾಸಗಿ ವ್ಯಾಪಾರಿಗಳ ಸ್ಪರ್ಧಿಯಾಗಿ, ಬ್ಯಾಂಕಿಂಗ್ ಅಥವಾ ಖನಿಜ ಸಂಪನ್ಮೂಲಗಳ ಗಣಿಗಾರಿಕೆ ವ್ಯವಹಾರಗಳನ್ನು ಕೈಗೊಳ್ಳಲು ಅದು ಸಕ್ಷಮವಾಗಿದೆ.

12. ರಾಜ್ಯವು ಅಥವಾ ರಾಜ್ಯದ ಏಜನ್ಸಿಗಳು ಕಾರ್ಪೊರೇಟ್ ಜಗತ್ತನ್ನು ಪ್ರವೇಶಿಸಿ, ಉದ್ಯಮಗಳನ್ನು ಕೈಗೊಂಡಾಗ ಅಥವಾ ವ್ಯಾಪಾರ ಅಥವಾ ವ್ಯವಹಾರಗಳ ಕೆಲವು ಕಾರಚಟುವಟಿಕೆ ಕೈಗೊಂಡಾಗ, ಅದು ವ್ಯಾಪಾರಿಯ ಅಥವಾ ವ್ಯವಹಾರಸ್ಥನ ಸಾಮಾನ್ಯ ಕಾರಪಾತ್ರವನ್ನು ಸ್ವತಃ ಪರಿಭಾವಿಸಿಕೊಳ್ಳುತ್ತದೆ.ಆಧುನಿಕ ಜಗತ್ತಿನಲ್ಲಿ, ಅವಶ್ಯವಾಗಿ ಶಾಸನಕ್ಕೆ ಒಳಪಟ್ಟು, ಮಹಾ ನಿಗಮದ ಸ್ವರೂಪವನ್ನು ತಾಳಲು ರಾಜ್ಯಕ್ಕೆ ಮುಕ್ತ ಅವಕಾಶವಿದೆ.

13. ಅರ್ಜಿದಾರನ ಪರ ಮಾನ್ಯ ನ್ಯಾಯವಾದಿಗಳ ವಾದವೆಂದರೆ, ಆತನು ವ್ಯವಹಾರ ನಡೆಸುತ್ತಿರುವ ಪ್ರದೇಶದಲ್ಲಿ ಮತ್ತೊಂದು ಮದ್ಯಸಾರ ಅಂಗಡಿಯ ಸ್ಥಾಪಿಸಿದರೆ, ಪರವಾನಗಿಯೊಂದಿಗೆ ನಡೆಸುತ್ತಿರುವಂಥ ಆತನ ವ್ಯವಹಾರವನ್ನು ಕುಂದಿಸಿದಂತಾಗುವುದರಿಂದ, ಆತನು ನಷ್ಟವನ್ನು ಅನುಭವಿಸತ್ತಾನೆ.ಇದು ಕೃತಿಯಲ್ಲದ ಹಾನಿಯನ್ನುಂಟು ಮಾಡುವ ರೂಢಿಗತ ವಿಷಯವಾಗಿದೆ.ಗೌಸೆಸ್ಟರ್ ಗ್ರಾಮರ್ ಸ್ಕೂಲ್ 2- ಮೊಕದ್ದಮೆಯಲ್ಲಿ, [ (1410) ವೈಬಿ 11 ಹೆಇಎನ್ IV, ಎಫ್‌ಒ 47, ಪಿಎಲ್.21, 23] ಪ್ರತಿವಾದಿಯು ಶಾಲಾ ಶಿಕ್ಷಕನಾಗಿದ್ದು, ವಾದಿಯ ಶಾಲೆಯ ಪಕ್ಕದಲ್ಲೇ ಪ್ರತಿಸ್ಪರ್ಧಿ ಶಾಲೆಯನ್ನು ಸ್ಥಾಪಿಸಿದನು ಮತ್ತು ವಾದಿಯ ಶಾಲೆಯಿಂದ ಬಾಲಕರು/ವಿದ್ಯಾರ್ಥಿಗಳು ಪ್ರತಿವಾದಿ ಶಾಲೆಗೆ ಗುಂಪು ಗುಂಪಾಗಿ ಬಂದು ಸೇರಿಕೊಂಡರು.ಈ ಮೊಕದ್ದಮೆಯಲ್ಲಿ, ನಿರ್ಬಂಧ ಅಥವಾ ನಷ್ಟಕ್ಕೆ ಯಾವ ಕ್ರಮವನ್ನು ಸಮರ್ಥಿಸಲಾಗುವುದಿಲ್ಲವೆಂದು ತೀರ್ಪು

ನೀಡಲಾಯಿತು.ಸ್ಪರ್ಧೆಯು ಯಾವುದೇ ನಷ್ಟವನ್ನುಂಟು ಮಾಡಿಲಿ, ಅದು ಕ್ರಮಕ್ಕೆ ಕಾರಣವಾಗುವುದಿಲ್ಲ, ಪರಂತು, ಯಾರೊಬ್ಬರ ಕಾನೂನುಬದ್ಧ ಹಕ್ಕುಗಳನ್ನು ಉಲ್ಲಂಘಿಸುವುದಿಲ್ಲ.ಅರ್ಜಿದಾರನ ಪರ ನ್ಯಾಯವಾದಿಗಳು, ಮದ್ಯಸಾರ ಅಂಗಡಿ ಸ್ಥಾಪಿಸುವುದರಿಂದ ಅಥವಾ ಆ ವ್ಯವಹಾರಗಳನ್ನು ನಡೆಸುವುದರಿಂದ ಯಾರೇ ಸ್ಪರ್ಧಿಯನ್ನು ಹೊರಗಿಡುವಂಥ ಕಾನೂನುಬದ್ಧ ಹಕ್ಕನ್ನು ಅರ್ಜಿದಾರನು ಯಾವ ಕಾನೂನಿನ ಅಡಿಯಲ್ಲಿ ಹೊಂದಿದ್ದಾನೆಯೋ ಆ ಕಾನೂನಿನ ಬಲವನ್ನು ಹೊಂದಿರುವ ಯಾವುದೇ ದಾಖಲೆಗಳನ್ನು ಈ ನ್ಯಾಯಾಲಯದ ಗಮನಕ್ಕೆ ತಂದಿರುವುದಿಲ್ಲ.

14. ಹಾಗಾಗಿ, ಈ ರಿಟ್ ಅರ್ಜಿಯಲ್ಲಿ ನಿರುಪಾಧಿಕವಾಗಿ ಯಾವುದೇ ಗುಣಾರ್ಹತೆ ಇಲ್ಲವಾದ್ದರಿಂದ, ಇದನ್ನು ಸ್ವೀಕರಿಸುವ ಹಂತದಲ್ಲೇ ವಜಾಗೊಳಿಸಲಾಗಿದೆ.ಆದಾಗ್ಯೂ, ಈ ಆದೇಶವು, ಕಾನೂನಿಗನುಗುಣವಾಗಿ ತನ್ನ ಕುಂದುಕೊರತೆಯ ಪರಿಹಾರಕ್ಕೆ ಸಂಬಂಧಪಟ್ಟ ಪ್ರಾಧಿಕಾರಿಗಳಿಗೆ ಮನವಿ ಸಲ್ಲಿಸಲು ಅರ್ಜಿದಾರನಾಗಿರುವ ಅವಕಾಶವನ್ನು ಮೊಟಕುಗೊಳಿಸತಕ್ಕದ್ದಲ್ಲ.

15. ಮುಖ್ಯ ವಿಷಯವನ್ನೇ ವಜಾಗೊಳಿಸಿರುವುದರಿಂದ, ಅರ್ಜಿದಾರನು ಸಹ ಯಾವುದೇ ಸಮರ್ಥನೀಯ ಹಕ್ಕನ್ನು ಹೊಂದಿಲ್ಲದಿರುವ ಕಾರಣ, ಮೊಕದ್ದಮೆ ನಡೆಸಲು ಅರ್ಜಿಯನ್ನು ಪರಿಗಣಿಸುವ ಅಗತ್ಯವಿಲ್ಲ.